**ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಬೈಂದೂರು**

**ಸಿಸಿ ನಂಬ್ರ: 1141/2023** **ಸಿಡಬ್ಲ್ಯೂ -2**

**ಪಿಡಬ್ಲ್ಯೂ** - 2

ಸಾಕ್ಷಿದಾರರ ಹೆಸರು : ಮಂಜು ಪೂಜಾರಿ

ತಂದೆಯ ಹೆಸರು : ರಾಮು ಪೂಜಾರಿ

ಪ್ರಾಯ : 52 ವರ್ಷ

ಉದ್ಯೋಗ : ಕೃಷಿ

ವಾಸ : ಗೋಳಿಹೊಳೆ

ದಿನಾಂಕಃ 07-09-2026ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾ.ಸಾ.1, 3 ಮತ್ತು 4 ರವರ ಪರಿಚಯ ಇರುವುದಿಲ್ಲ. ಆರೋಪಿ ಪರಿಚಯ ಇರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸುಮಾರು ಎರಡು ವರ್ಷಗಳ ಹಿಂದೆ ನಾನು , ಚಾಸಾ 1 ರವರೊಂದಿಗೆ ಕಾರಿನಲ್ಲಿ ಆಸ್ಪತ್ರೆಗೆ ಹೋಗುತ್ತಿರುವಾಗ ಕಾರನ್ನು ಆರೋಪಿ ಚಲಾಯಿಸುತ್ತಿದ್ದು, ನಾನು ಕಾರಿನ ಹಿಂಬದಿಯ ಸೀಟಿನಲ್ಲಿ ಕುಳಿತುಕೊಂಡಿದ್ದೆ. ನಾವು ಬೈಂದೂರು ಅಂಬಾಗಿಲು ನಾಯ್ಕನಕಟ್ಟೆಯ ಬಳಿ ನಾವು ಮೆಲ್ಲ ಹೋಗುತ್ತಿರುವಾಗ ಒಮ್ಮೆಲೆ ಒಬ್ಬ ಸೈಕಲ್ ಸವಾರ ರಸ್ತೆಯ ಮಧ್ಯಭಾಗಕ್ಕೆ ಅಡ್ಡಲಾಗಿ ಬಂದು ನಮ್ಮ ಕಾರಿಗೆ ಡಿಕ್ಕಿ ಪಡಿಸಿ ಬಿದ್ದಿರುತ್ತಾನೆ ತಕ್ಷಣ ನಾವು ಇಳಿದು ನೋಡಿದಾಗ ಆತನ ತಲೆಗೆ ಪೆಟ್ಟಾಗಿರುವುದು ಕಂಡುಬಂದಿದ್ದು ಆತನನ್ನು ತುರ್ತು ವಾಹನದಲ್ಲಿ ಕುಂದಾಪುರ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ. ನಂತರ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿರುವುದಿಲ್ಲ , ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ನಾವು ಹೋಗುತ್ತಿದ್ದ ವಾಹನ ಮತ್ತು ಸೈಕಲ್ ನ ಭಾವಚಿತ್ರವನ್ನು ನೋಡಿ ದರೆ ಗುರುತಿಸುತ್ತೇನೆ. ಸಾಕ್ಷಿಯು ಕಾರಿನ ಎರಡು ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 6 ಎಂದು ಗುರುತಿಸಲಾಗಿದೆ. ಸಾಕ್ಷಿಯು ಸೈಕಲ್ ನ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷ್ಯ ಎಂದು ಪರಿಗಣಿಸಲು ವಿನಂತಿಸಿಕೊಂಡಿದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿಃ 02-12-2019 ರಂದು ನೀವು ನಿಪಿ 5 ರಲ್ಲಿ ತೋರಿಸಿದ ಕಾರಿನಲ್ಲಿ ಚಿಕಿತ್ಸೆಗಾಗಿ ಕುಂದಾಪುರ ಆಸ್ಪತ್ರೆಗೆ ಹೋಗುತ್ತಿರುವಾಗ ಸಮಯ ಸಂಜೆ 05.45 ಗಂಟೆಗೆ ನಂದನವನ ಬಳಿ ತಲುಪುತ್ತಿರುವಾಗ ಕಾರನ್ನು ಆರೋಪಿಯು ಅತಿವೇಗ ಮತ್ತು ಅಜಾಗರೂಕತೆಯಿಂದ ರಸ್ತೆಯ ತೀರ ಬಲಭಾಗಕ್ಕೆ ಚಲಾಯಿಸಿ ಮಹಾಬಲೇಶ್ವರ ದೇವಸ್ಥಾನದ ಕಡೆಗೆ ರಾಷ್ಟ್ರಿಯ ಹೆದ್ದಾರಿ ಬಳಿ ಬಂದು ಯು ಟರ್ನ್ ಬಳಿ ಸೈಕಲ್ ಸವಾರಿ ಮಾಡಿಕೊಂಡು ಹೋಗುತ್ತಿದ್ದ ವ್ಯಕ್ತಿಯ ಸೈಕಲ್ ಗೆ ಹಿಂದಿನಿಂದ ಡಿಕ್ಕಿ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಡಿಕ್ಕಿಯ ಪರಿಣಾಮ ಸೈಕಲ್ ಸವಾರ ರಸ್ತೆಗೆ ಬಿದಿದ್ದು ನೀವು ಕಾರನ್ನು ಸ್ವಲ್ಪ ಮುಂದೆ ನಿಲ್ಲಿಸಿ ಆತನನ್ನು ಉಪಚರಿಸಿದ್ದು ಆಗ ಸಾರ್ವಜನಿಕರು ಸೇರಿರುತ್ತಾರೆ ಎಂದರೆ ಸರಿಯಲ್ಲ. ಗಾಯಗೊಂಡ ವ್ಯಕ್ತಿಯ ಹೆಸರು ನಾಗಯ್ಯ ಪೂಜಾರಿ ಎಂದು ನಿಮಗೆ ತಿಳಿಸಿಯಿತು , ಆತನ ತಲೆಗೆ ತೀವ್ರ ಸ್ವರೂಪದ ರಕ್ತಗಾಯವಾಗಿತ್ತು ಎಂದರೆ ಸರಿಯಲ್ಲ. ಅಪಪಘಾತದಿಂದ ಚಾಸಾ 1 ರವರಿಗೂ ಸಹ ತರಚಿದ ಗಾಯವಾಗಿತ್ತು ಎಂದರೆ ಸರಿಯಲ್ಲ. ಚಾಸಾ 1 ರವರನ್ನು ಚಿಕಿತ್ಸೆಗಾಗಿ ಅಂಜಲಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು, ನಾಗಯ್ಯ ಪೂಜಾರಿಯವರನ್ನು ಕುಂದಾಪುರಕ್ಕೆ ಕಳುಹಿಸಿಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ನಾಗಯ್ಯ ಪೂಜಾರಿಯವನ್ನು ಮಣಿಪಾಲದ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದಾರಿ ಮಧ್ಯ ಮೃತ ಪಟ್ಟಿರುತ್ತಾರೆ ಎಂದು ನಿಮಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಅಪಘಾತಕ್ಕೆ ಆರೋಪಿಯ ಅತಿವೇಗ ಹಾಗು ಅಜಾಗರೂಕತೆಯ ಚಾಲನೆಯೇ ಕಾರಣ ಎಂದರೆ ಸರಿಯಲ್ಲ. ಆರೊಪಿಗೆ ನಿಮ್ಮ ಪರಿಚಯಸ್ಥನಾದ್ದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್.ಪಿ.ಸಿ. ರವರಿಂದ</u>**

**ಏನೂ ಇಲ್ಲ.**

**<u>ಮರು ವಿಚಾರಣೆಃ</u>** ಇಲ್ಲ

**(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಬೈಂದೂರು**